# ಆಹಾ ಸುದ್ದಿ!

★ ಸಸಿತೋಟ



ಬ್ರೆಜಿಲ್‌ನ ಸಮುದಾಯವೊಂದರಲ್ಲಿ ವರ್ಷಕ್ಕೊಮ್ಮೆ ಪವಿತ್ರರಾಗುವ ಕಾರ್ಯ ನಡೆಯುತ್ತದಂತೆ. ಅರ್ಚಕ ಸಿಗರೇಟ್ ಹೊಗೆ ಬಿಟ್ಟು ಅವರ ಪಾಪಗಳನ್ನೆಲ್ಲ ತೊಳೆದು, ಪಾಪಾತ್ಮಗಳನ್ನು ಓಡಿಸಿ ಪವಿತ್ರರನ್ನಾಗಿ ಮಾಡುತ್ತಾನಂತೆ. ಪಾಪಗಳನ್ನು ತೊಳೆಯುವ ಸಿಗರೇಟ್ ಅನ್ನು ಸೇದುವುದು ಪಾಪಕಾರ್ಯ ಎಂದು ಯಾರು ಹೇಳಿದ್ದಾರೋ!

ವಿದೇಶಾಂಗ ವ್ಯವಹಾರ ಸಚಿವೆ ಸುಷ್ಮಾ ಸ್ವರಾಜ್ ಬಳಿ ಮಂತ್ರದಂಡವಿದೆ ಎಂದು ಹಲವರು ತಿಳಿದುಕೊಂಡಂತೆ ಕಾಣುತ್ತದೆ. ಕಳೆದ ತಿಂಗಳು ಒಬ್ಬಾತ ತನ್ನ ಹೊಸ ಫ್ರಿಡ್ಜ್ ಹಾಳಾಗಿದೆ, ಸಹಾಯ ಮಾಡಿ ಎಂದು ಟ್ವಿಟರ್‌ನಲ್ಲಿ ಮೊರೆಯಿಟ್ಟಿದ್ದ. ಈಗ ಇನ್ನೊಬ್ಬಾತ ತನ್ನ ಹೊಸ ಕಾರು ಕೈಕೊಟ್ಟಿದೆ, ನೆರವು ನೀಡಿ ಎಂದು ಸಂದೇಶ ಹಾಕಿದ್ದಾನಂತೆ. ಸಚಿವೆ ಆತನಿಗೆ ಸ್ಥಳೀಯ ಮೆಕ್ಯಾನಿಕ್ ಸಂಪರ್ಕಿಸುವಂತೆ ಮರುಟ್ವೀಟ್ ಮಾಡಿದ್ದಾರಂತೆ. ಒಟ್ಟಿನಲ್ಲಿ ಆತನಿಗೆ ನೆರವಂತೂ ಸಿಕ್ಕಿತಲ್ಲ, ಇಲ್ಲದಿದ್ದರೆ ಮೆಕ್ಯಾನಿಕ್ ಬಳಿಯೂ ಹೋಗದೆ ಟ್ವೀಟ್ ಮೇಲೆ ಟ್ವೀಟ್ ಮಾಡುತ್ತ ಕೂರುತ್ತಿದ್ದನೇನೋ!



ಅಮೆರಿಕಾದ ಸ್ಯಾಕ್ರಾಮೆಂಟೋದ ಟಾರಸ್ ಉರುಫ್ ಟೆಕ್‌ರಾಕ್ಸ್ ತನ್ನ ಹುಟ್ಟುಹಬ್ಬದ ದಿನ ದೈತ್ಯ ಕೇಕ್ ಮಾಡಿಸಿ ಅದನ್ನು ನಾಶಪಡಿಸಿದನಂತೆ. 230 ಕೆಜಿ ತೂಕದ ಸ್ಮಾರ್ಟ್‌ಫೋನ್ ಆಕಾರದ ಈ ಕೇಕ್‌ನಲ್ಲಿ ಚೆಂದದ ಯುವತಿಯೊಬ್ಬಳು ಡೈವ್ ಹೊಡೆದ ವಿಡಿಯೋವನ್ನು ಯೂಟ್ಯೂಬ್‌ನಲ್ಲಿ ಹರಿಯಬಿಟ್ಟಿದ್ದಾನೆ. ಈ ಹಿಂದೆ ಸ್ಮಾರ್ಟ್‌ಫೋನ್‌ಗಳನ್ನು ನಾಶಪಡಿಸಿ ಖುಷಿಪಟ್ಟಿದ್ದ ಈ ಯುವಕ ವಿನಾಶದಲ್ಲೂ ಸೃಜನಶೀಲತೆ ಮೆರೆದು, ಮನೆಯಲ್ಲಿ ಮಾಡಬೇಡಿ ಎಂದು ಸಲಹೆಯನ್ನೂ ಕೊಟ್ಟಿದ್ದಾನಂತೆ!

ನ್ಯೂಜೆರ್ಸಿಯಲ್ಲಿ ಮೃತಪಟ್ಟ ಬಿಲ್ ಬ್ಲ್ಯಾಕ್ ಎಂಬಾತನ ಹೆಸರಲ್ಲಿ ಆತನ ಪತ್ನಿ ಹಾಗೂ ಪ್ರೇಯಸಿ ಎರಡೆರಡು ನಿಧನ ವಾರ್ತೆ ಹಾಕಿಸಿದ್ದಾರಂತೆ. ಅದೂ ಒಂದೇ ಪತ್ರಿಕೆಯಲ್ಲಿ, ಒಂದರ ಕೆಳಗೆ ಇನ್ನೊಂದು. ನಿಧನ ವಾರ್ತೆ ಹಾಕಿಸುವ ವಿಷಯದಲ್ಲಿ ಪತ್ನಿ– ಪ್ರೇಯಸಿ ಮಧ್ಯೆ ಜಟಾಪಟಿಯಾಗಿ, ಪತ್ರಿಕೆಯವರು ಈ ಸೂತ್ರ ಅನುಸರಿಸಿದರಂತೆ. ಒಂದು ಸುದ್ದಿಯಲ್ಲಿ ಆತ ಪತ್ನಿ, ಮಕ್ಕಳನ್ನು ಅಗಲಿದ್ದರೆ, ಇನ್ನೊಂದರಲ್ಲಿ ಪ್ರೇಯಸಿಯನ್ನು ಅಗಲಿದ ಎಂದಿದೆಯಂತೆ. ಪುಣ್ಯಾತ್ಮ, ಸತ್ತು ಈ ಜಟಾಪಟಿ ತಪ್ಪಿಸಿಕೊಂಡ.



ಚೀನಾದಲ್ಲಿ ಇತ್ತೀಚೆಗೆ ನಡೆದ ವ್ಯಾಲೆಂಟೈನ್ ದಿನದಂದು ಹೊಸ ಜೋಡಿಯೊಂದನ್ನು ಗಾಜಿನ ಸೇತುವೆಯಿಂದ ತೂಗು ಬಿಡಲಾಯಿತು. ಕೆಳಗೆ ಆಳದ ಕಮರಿ. ಸಂಸಾರದ ಆಳ ಎಷ್ಟೆಂಬುದನ್ನು ಈ ಜೋಡಿ ಈ ರೀತಿ ಅಳೆಯಲು ಹೋಗಬಾರದಿತ್ತು.

ಈ ಕಾಗೆ ಪೊಟರೆಯೊಗಿನ ಹುಳವನ್ನು ಹೊರ ತೆಗೆಯಲು ಬಳಸಿದ್ದು ಬಾಗಿದ ಕಡ್ಡಿಯನ್ನು. ಹಿಂದೊಮ್ಮೆ ಸಿಕ್ಕ ತಂತಿಯನ್ನೇ ಬಗ್ಗಿಸಿ ಇವೆಲ್ಲ ತಂತ್ರಗಳು ತನಗೆ ಹುಟ್ಟಿನಿಂದ ಬಂದಿದ್ದು ಎಂದು ಈ ಕಾಗೆ ಸಾಬೀತುಪಡಿಸಿತ್ತಂತೆ. ಕಡ್ಡಿಯನ್ನು ಬಾಗಿಲಿನ ಬೀಗ ತೆರೆಯುವಷ್ಟು ಬಗ್ಗಿಸಲು ಬರುತ್ತದೆಯೇ ಕಾಗೆಗೆ ಎಂದು ಕದೀಮನೊಬ್ಬ ನಕ್ಕನಂತೆ.

